ದಿನಾಂಕ 11-04-2014ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
ಪಾಟೀ ಸವಾಲುಃ- ಡಿ.ಜಿ.ಪಿ. ಪ್ರತಿವಾದಿಗಳಪರ ವಕೀಲರಿಂದಃ-

ವಾದಿಗಳು ನನ್ನ ಸಂಬಂಧಿಕರು ಅಲ್ಲ ನೇರೆಹೊರೆಯವರು. ವಾದಿಗಳ ಮುತ್ತಾತ ಮಲ್ಲಯ್ಯಾನನ್ನು ನಾನು ನೋಡಿಲ್ಲಾ. ಲಕ್ಷ್ಮಣ್ಣ ಮತ್ತು ತಿಪ್ಪಯ್ಯಾ ಸತ್ತ ವರ್ಷ ನನಗೆ ಗೊತ್ತಿಲ್ಲಾ. ವಾದಿಗಳ ವಂಶಾವಳ ಬಗ್ಗೆ ನನ್ನ ತಾತ ನರಸಣ್ಣ ಹೇಳಿದ್ದಾರೆ. ಲಕ್ಷ್ಮಣ್ಣ ಮಕ್ಕಳು ಇಲ್ಲದೇ ಮೃತ ಪಟ್ಟಿದ್ದಾರೇಂದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆಂದರೆ ಸರಿಯಲ್ಲಾ. ಲಕ್ಷ್ಮಣ ಮತ್ತು ತಿಪ್ಪಣ್ಣ ಸತ್ತಾಗ ನನಗೆ 15 ವರ್ಷ ವಯಸ್ಸಾಗಿತ್ತು. ಆಗಾ ನನಗೆ ಏನು ತಿಳಿಯುತ್ತಿದ್ದಿಲ್ಲಾ ಎಂದರೆ ಸರಿ. ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರಪಡಿಸಿದ್ದಾರೆ. ಆ ರೀತಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲಾ. ಸುಳ್ಳು ವಂಶಾವಳ ಹಾಜರಪಡಿಸಿದ್ದಾರೇಂದರೆ ಸರಿಯಲ್ಲಾ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ)

ಮುಖ್ಯ ನ್ಯಾಯಿಕ ದಂಡಾಧಿಕಾರಿ, ರಾಯಚೂರು.